**ದಿನಾಂಕ: 06-02-2021 ರಂದು ಬೆಳಗ್ಗೆ 10:30 ಗಂಟೆಗೆ ವಾರ್ಡ್ ಸಂಖ್ಯೆ 166 ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

*ಹಾಜರಿದ್ದ ಅಧಿಕಾರಿಗಳು:-*

1. ಶ್ರೀ. ಪ್ರದೀಪ್ ರಾಥೋಡ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ನಾಗರಾಜ. ಸಿ. ಎಸ್ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 166 ಕರೀಸಂದ್ರ)
3. ಶ್ರೀಮತಿ. ಲೀಲಾವತಿ – ಕಂದಾಯ ವಸೂಲಿಗಾರರು (ವಾರ್ಡ್ 166 ಕರೀಸಂದ್ರ)
4. ಶ್ರೀ. ರುದ್ರೇಶ್ – ಸಹಾಯಕ ಅಭಿಯಂತರರು (ಬೆಸ್ಕಾಂ)
5. ಶ್ರೀ. ನರಸಿಂಹಲು – ಹಿ.ಆ.ಪ– (ವಾರ್ಡ್ 166 ಕರೀಸಂದ್ರ)
6. ಶ್ರೀ. ಕಾರ್ತಿಕ್ – ಕಿ.ಆ.ಪ (ಹೊರಗುತ್ತಿಗೆ ಆಧಾರದ ಮೇಲೆ) (ವಾರ್ಡ್ 166 ಕರೀಸಂದ್ರ)
7. ಟ್ರಾಫಿಕ್ ಪೋಲೀಸ್ ಇಲಾಖೆ ಜಯನಗರ/ ಬನಶಂಕರಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯ ಪೊಲೀಸ್ ಅಧಿಕಾರಿಗಳು.
8. 7ನೇ ಬ್ಲಾಕ್ ಜಯನಗರ ಮತ್ತು ಕಾವೇರಿನಗರ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 166 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ವಾರ್ಡ್ ಸಮಿತಿ ಸಭೆಯಲ್ಲಿ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಾಂ, ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

ಸಮಿತಿ ಸಭೆಯಲ್ಲಿ ವಾರ್ಡ್‌ನ ಹಿರಿಯ ಆರೋಗ್ಯ ಪರಿವೀಕ್ಷಕರಿಂದ ರಜತಾದ್ರಿ ಮುಂಭಾಗ, ಅವರೇಕಾಯಿ ವೃತ್ತ ಇಲ್ಲಿ ಫುಟ್ ಪಾತ್‌ಗಳ ಮೇಲೆ ದೀಪಕ್ ಹಾಸ್ಪಿಟಲ್ ರಸ್ತೆಯ ಫುಟ್‌ಬಾತ್‌ನ್ನು ಸಣ್ಣ ಸಣ್ಣ ವ್ಯಾಪಾರಿಗಳು ಅಂದರೆ ಕ್ಯಾಂಟೀನ್, ಹಾಲಿನ ಭೂತ್, ಜ್ಯೂಸ್ ಸೆಂಟರ್, ತಳ್ಳುವ ಗಾಡಿಗಳನ್ನು ಇಟ್ಟು ವ್ಯಾಪಾರ ಮಾಡುತ್ತಿದ್ದು ಸಾರ್ವಜನಿಕರು ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುತ್ತದೆ ಎಂದು ವಾರ್ಡ್ ಕಮಿಟಿಯಲ್ಲಿ ಸಾರ್ವಜನಿಕರು ದೂರಿರುತ್ತಾರೆ. ಕೂಡಲೇ ನೋಟೀಸ್‌ಗಳನ್ನು ಮಾಲೀಕರಿಗೆ ನೀಡುವಂತೆ ಹಾಗೂ ಕ್ರಮಕೈಗೊಳ್ಳಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಮತ್ತು ಟ್ರಾಫಿಕ್ ಪೊಲೀಸ್ ರವರಿಗೆ ವಾರ್ಡಿನ ಅಧ್ಯಕ್ಷರು ಸೂಚನೆ ನೀಡಿರುತ್ತಾರೆ. (ಆರೋಗ್ಯ ಇಲಾಖೆ)

ಕನಕಪುರ ರಸ್ತೆ–ಕುಮಾರಸ್ವಾಮಿ ಲೇಔಟ್ ರಸ್ತೆಯ ಬನಶಂಕರಿ ಬಸ್ ಸ್ಟಾಪ್‌ನಲ್ಲಿ ಬಿಎಂಟಿಸಿ ಬಸ್‌ಗಳು ಸಾರ್ವಜನಿಕರನ್ನು ಬಸ್‌ಗಳಿಗೆ ಹತ್ತಿಸಿಕೊಳ್ಳಲು ಹಾಗೂ ಇಳಿಸಲು ಬಸ್‌ಗಳನ್ನು ನಿಲ್ಲಿಸುತ್ತಿರುವುದರಿಂದ ಟ್ರಾಫಿಕ್ ಜಾಮ್ ಹೆಚ್ಚಾಗಿ ತುಂಬಾ ತೊಂದರೆಯಾಗುತ್ತಿರುತ್ತದೆ ಎಂದು ಶ್ರೀ. ಪಟೇಲ್ ರವರು ಹಾಗೂ ಟ್ರಾಫಿಕ್ ಪೋಲೀಸ್ ಬನಶಂಕರಿ ರವರು ತಿಳಿಸಿರುತ್ತಾರೆ. ಬಿಎಂಟಿಸಿ ಡಿಪೋನ ಮ್ಯಾನೇಜರ್‌ಗೆ ವಾರ್ಡಿನ ಅಧ್ಯಕ್ಷರು ಬಸ್‌ಗಳನ್ನು ನಿಲ್ಲಿಸದಂತೆ ಕ್ರಮಕೈಗೊಳ್ಳಲು ಸೂಚನೆ ನೀಡಿರುತ್ತಾರೆ. ಡಿಸಿ, ಬಿಎಂಟಿಸಿ ಯವರಿಗೆ ಪತ್ರ ಬರೆಯಲು ಅಧ್ಯಕ್ಷರು ತಿಳಿಸಿರುತ್ತಾರೆ. ಟ್ರಾಫಿಕ್ ಪೋಲೀಸ್ ಬನಶಂಕರಿ ರವರು ಕೃಷ್ಣ ಹೋಟೆಲ್ ಹತ್ತಿರ ಆಟೋಸ್ಟಾಂಡ್ ಮತ್ತು ಪಾರ್ಕ್ ಅನ್ನು ತೆಗೆದಿದ್ದಲ್ಲಿ ಬಸ್‌ಗಳ ಟ್ರಾಫಿಕ್ ಸಮಸ್ಯೆ ನಿವಾರಣೆಯಾಗುವುದೆಂದು ತಿಳಿಸಿರುತ್ತಾರೆ.

ರಜತಾದ್ರಿ ಹೋಟೆಲ್, ಅಡಿಗಾಸ್ ಹೋಟೆಲ್ ಮತ್ತು ಪೋಸ್ಟ್ ಆಫೀಸ್ ಹತ್ತಿರ ರಸ್ತೆಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಿರುವುದರಿಂದ ರಸ್ತೆಗಳಲ್ಲಿ ಓಡಾಡಲು ತುಂಬಾ ತೊಂದರೆಯಾಗಿರುತ್ತದೆ ಎಂದು ವಾರ್ಡ್ ಸಭೆಯಲ್ಲಿ ಸಾರ್ವಜನಿಕರು ತಿಳಿಸಿರುತ್ತಾರೆ. ಆದುದ್ದರಿಂದ ಈ ರಸ್ತೆಗಳಲ್ಲಿ ವಾರಕ್ಕೊಮ್ಮೆ ಒಂದು ಬದಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ವಾರ್ಡಿನ ಅಧ್ಯಕ್ಷರು ಟ್ರಾಫಿಕ್ ಪೋಲೀಸ್ ರವರಿಗೆ ತಿಳಿಸಿರುತ್ತಾರೆ.

ಕರೀಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಹುಣಸೆಮರ ಸಿಗ್ನಲ್ ಹಿಂಭಾಗ ಹಾಗೂ ವಿಷ್ಣುವರ್ಧನ್ ರಸ್ತೆಯಲ್ಲಿ ಮೋನೋಟೈಪ್ ಪಾರ್ಕ್ ಇಂದ ಪಿಎನ್‌ಟಿ (9ನೇ ಮುಖ್ಯರಸ್ತೆ) ಯವರೆಗೆ ಹಾಳಾಗಿರುವ ಅನಾವಶ್ಯಕವಾಗಿ/ಅನಧಿಕೃತವಾಗಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ರವರು ಮಾತನಾಡಿ ಸಂಚಾರ ಪೋಲಿಸ್ ಠಾಣೆ, ಬನಶಂಕರಿ/ಜಯನಗರ ಪೋಲೀಸ್ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಬಿಡಬ್ಲ್ಯೂಎಸ್‌ಎಸ್‌ಬಿ ವಿಭಾಗ ವತಿಯಿಂದ ಕಾವೇರಿನಗರ ಮತ್ತು ಅಂಬೇಡ್ಕರ್ ನಗರ ಇಲ್ಲಿ ವಾಸಿಸುವ ನಿವಾಸಿಗಳಿಗೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿರುತ್ತದೆ. ಇಲಾಖೆ ವತಿಯಿಂದ ಮಧ್ಯರಾತ್ರಿಯ ಸಮಯದಲ್ಲಿ (12:30) 8ನೇ ಅಡ್ಡರಸ್ತೆಯಿಂದ 15ನೇ ಅಡ್ಡರಸ್ತೆಯವರೆಗೆ ತುಂಬಾ ತೊಂದರೆಯಾಗಿರುತ್ತದೆ ಎಂದು ಶ್ರೀ. ವೇಣುಗೋಪಾಲ್ ರವರು ತಿಳಿಸಿರುತ್ತಾರೆ. ಬಿಡಬ್ಲ್ಯೂಎಸ್‌ಎಸ್‌ಬಿ ಇನ್ಸ್‌ಪೆಕ್ಟರ್ ರವರಿಗೆ ಕೂಡಲೇ ನೀರಿನ ಸಮಸ್ಯೆ ಬಗೆಹರಿಸಲು ಸೂಚನೆ ನೀಡಿರುತ್ತಾರೆ. ವಾರ್ಡಿನಲ್ಲಿ ಅಗೆದಿರುವ 27ನೇ ಅಡ್ಡರಸ್ತೆ ಮತ್ತು 24ನೇ ಎ ಅಡ್ಡರಸ್ತೆ ಇವುಗಳನ್ನು ಕೂಡಲೇ ಡಾಂಬರೀಕರಣ ಮಾಡೊಕೊಡಲು ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಗೆ ತಿಳಿಸಲಾಯಿತು.

ಪೋಲೀಸ್ ವಿಭಾಗ (ಲಾ ಅಂಡ್ ಆರ್ಡರ್) ರವರು ಕೆ.ಆರ್. ರಸ್ತೆ, ಪೈ ಹೋಟೆಲ್ ಹಾಗೂ ಸೇವಾಕ್ಷೇತ್ರ ಆಸ್ಪತ್ರೆ ಗಳ ಹತ್ತಿರ ರಸ್ತೆಯ ಬೀದಿ ದೀಪಗಳು ಇದ್ದು ಅಕ್ಕ ಪಕ್ಕದ ಮರದ ರೆಂಬೆಗಳು ಬೀದಿ ದೀಪಗಳ ಹಂತದ ವರೆಗೂ ಬೆಳೆದಿರುವುದರಿಂದ ಬೀದಿ ದೀಪದ ಬೆಳಕು ರಸ್ತೆಗೆ ಬೀಳುತ್ತಿರುವುದಿಲ್ಲ ಎಂದು ಮಾತನಾಡಿದರು. ಹಾಗೂ ಕೆ.ಆರ್ ರಸ್ತೆ ಜೈನ್ ಪ್ರಕೃತಿ ಅಪಾರ್ಟ್‌ಮೆಂಟ್ ಎದುರು (9ನೇ ಮುಖ್ಯರಸ್ತೆ) ಒಣಗಿರುವ ಮರಗಳನ್ನು ತೆಗೆಯಲು ವಾರ್ಡಿನ ಅಧ್ಯಕ್ಷರು ರವರು ಬಿಬಿಎಂಪಿ ಅರಣ್ಯ ವಿಭಾಗದವರಿಗೆ ದೂರವಾಣಿ ಮುಖಾಂತರ ಸದರಿ ರೆಂಬೆಗಳನ್ನು ಹಾಗೂ ಮರಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳುವಂತೆ ಸೂಚಿಸಿದರು.

ಬೆಸ್ಕಾಂ ಇಲಾಖೆಯ ರಮೇಶ್ ಕಿರಿಯ ಅಭಿಯಂತರರು ರವರಿಗೆ 27ನೇ ಅಡ್ಡರಸ್ತೆಯಲ್ಲಿ ಹಾಲಿ ಬಾಕ್ಸ್ ಅನ್ನು ತೆಗೆಯಲು ಈ ಹಿಂದಿನ ಸಭೆಯಲ್ಲಿ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದ್ದರೂ ಸಹ ಬಾಕ್ಸ್‌ನ್ನು ತೆಗೆದಿರುವುದಿಲ್ಲ. ಆದ್ದರಿಂದ ಫುಟ್‌ಪಾತ್ ಕಾಮಗಾರಿಯ ಕೆಲಸವನ್ನು ನಿರ್ವಹಿಸಲು ತುಂಬಾ ತೊಂದರೆಯಾಗಿರುತ್ತದೆ. ಆದುದ್ದರಿಂದ ಕೂಡಲೆ ಬಾಕ್ಸ್‌ಅನ್ನು ಮತ್ತು ವಾರ್ಡಿನ ಟಿಸಿಗಳ ಹತ್ತಿರ ಹಾಳಾಗಿರುವ / ಕಿತ್ತುಹೋಗಿರುವ ಫೆನ್ಸಿಂಗ್ ಅನ್ನು ಸರಿಪಡಿಸಿ ದಿನಾಂಕ: 10-02-2021 ರೊಳಗೆ ವರದಿ ನೀಡುವಂತೆ ರಮೇಶ್ ಕಿರಿಯ ಅಭಿಯಂತರರು ರವರಿಗೆ ಸೂಚಿಸಿರುತ್ತಾರೆ. ಬೆಸ್ಕಾಂ ವತಿಯಿಂದ ಕ್ರಮ ಕೈಗೊಳ್ಳದಿದ್ದರೆ ನಿಮ್ಮ ಇಲಾಖೆಯ ಮೇಲಾಧಿಕಾರಿಗಳಿಗೆ ಪತ್ರ ಬರೆದು ನಿಮ್ಮ ಮೇಲೆ ಕ್ರಮ ಕೈಗೊಳ್ಳಲು ಸೂಚಿಸಲಾಗುವುದು ಎಂದು ತಿಳಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಪ್ರದೀಪ್ ರಾಥೋಡ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

CSN AE 15/2/21

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 166